

# ಕಪ್ಪು ಕೆರೆಯ ಬಿಳಿ ಕೊಕ್ಕರೆ

ಎಂ.ಎಸ್. ವೇದಾ

**ಜಾತಿಗೆ ವ್ಯಾಖ್ಯಾನ ಕೊಡಲು ಕಾದಿರುವ ಜನರ ನಡುವೆ ಪ್ರೀತಿಗೆ ವ್ಯಾಖ್ಯಾನ ಎಲ್ಲಿದೆ?**

ಪ್ರಕಾಶ್ ಭಾಟಿಯಾ ಚುಮುಚುಮು ನಸುಕಿನಲ್ಲಿಯೇ ಏದುಸಿರು ಬಿಡುತ್ತಾ ಜಾಗಿಂಗ್ ಹೋಗುತ್ತಿದ್ದ. ಕಪ್ಪಳ್ಳಿಯಲ್ಲಿ ಜ್ಯೂನಿಯರ್ ಎಂಜನಿಯರ್ ಆಗಿ ಕೆಲಸಕ್ಕೆ ಆರ್ಡರ್ ಬಂದಾಗ ಕುಣಿದು ಕುಪ್ಪಳಿಸುವಷ್ಟು ಸಂತೋಷವಾಗಿದ್ದರೂ, ತಾನಿರಬೇಕಾದುದು ಹಳ್ಳಿಯೂ ಅಲ್ಲದ, ನಗರವೂ ಅಲ್ಲದ, ನಗರೀಕರಣದತ್ತ ಹೆಜ್ಜೆ ಇಡುತ್ತಿರುವಂತಹ ಪ್ರದೇಶದಲ್ಲಿ ಎಂಬುದರ ಅರಿವಾದಾಗ ಅವನ ಅರ್ಧ ಉತ್ಸಾಹ ಕಮರಿ ಹೋಗಿತ್ತು. ಆದರೆ 'ನಿರುದ್ಯೋಗಿ'ಯ ಲೇಬಲ್ ಹಚ್ಚಿಕೊಂಡು ಪಟ್ಟಣದಲ್ಲಿ ಭ್ರಮೆಯ ಬದುಕನ್ನು ಜೀವಿಸುವುದಕ್ಕಿಂತ, ವಾಸ್ತವವನ್ನು ಎದೆಗೊಟ್ಟು ಎದುರಿಸುವುದು ಸೂಕ್ತವೆಂದು ಅಲ್ಲಿಗೆ ಬಂದಿದ್ದ.

ಕೆರೆಯ ಏರಿಯ ಮೇಲೆ ಓಡುತ್ತಿದ್ದ ಭಾಟಿಯಾನ ಕಾಲುಗಳು ತಟ್ಟನೆ ನಿಂತವು. ಕಪ್ಪುಕೆರೆಯಲ್ಲಿ ತೇಲುತ್ತಿರುವ ಕಪ್ಪಾದ ವಸ್ತುವೊಂದು ಅವನ ಕಾಲುಗಳನ್ನು ತಡೆದಿತ್ತು. ಬಹುಶಃ ಶಿವಲಿಂಗೇಗೌಡರ ಮನೆಯ ಮಜಭೂತಾದ ಕೋಣ ಬೇಸಿಗೆಯ ಬಿಸಿಲಿಗೆ ರಾತ್ರಿ ಮನೆಗೆ ಹೋಗುವುದನ್ನೂ ಮರೆತು ಇಲ್ಲಿಯೇ ಝಾಂಡಾ ಊರಿರಬೇಕು ಎಂದು ಯೋಚಿಸಿದವನಿಗೆ ನಗು ಬಂದಿತು. ಅವನ ನಗು ತುಟಿಗಿಳಿಯುವ ಮುನ್ನವೇ ಕೆರೆಯಲ್ಲಿನ ಆ ಕಪ್ಪು ವಸ್ತು